ಮಗು ಸ್ನೇಹಿ ಸಮಾಜಕ್ಕಾಗಿ

# ಶಿಕ್ಷಣ ಸಂಚಲನ

ಸಂಚಿಕೆ: 2023–24







## ನಿಮ್ಮೊಂದಿಗೆ....

ಶಿಕ್ಷಣ ಹಕ್ಕು ಕಾಯಿದೆ 2009ರ ಆಶಯದಂತೆ ಸ್ಥಳೀಯ ಸರಕಾರಗಳು, ಸರಕಾರಿ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗುಣಮಟ್ಟದ ಶಿಕ್ಷಣದ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದರ ಮೂಲಕ ಮಗು ಸ್ನೇಹಿ ಶಾಲೆ ನಿರ್ಮಾಣ ಮಾಡಲು ಸಾಧ್ಯ. ಶಾಲಾ ಕುಂದುಕೊರತೆ ನಿವಾರಣೆ ವ್ಯವಸ್ಥೆಗಳನ್ನು ಮೇಲ್ವಿಚಾರಣೆ ಮತ್ತು ಬಲಪಡಿಸುವುದರ ಜೊತೆಗೆ ಅನುದಾನವನ್ನು ಶಾಲಾಭಿವೃದ್ಧಿಗೆ ಮೀಸಲಿಡುವುದು ಸ್ಥಳೀಯ ಸರಕಾರದ ಜವಾಬ್ದಾರಿಯಾಗಿದೆ. ಆದರೆ ಪ್ರಸ್ತುತ ಶಾಲೆ ಮತ್ತು ಸ್ಥಳೀಯ ಸರಕಾರಗಳ ನಡುವೆ ಅಂತರ ಕಂಡು ಬಂದಿದ್ದು ಈ ಅಗತ್ಯತೆಯನ್ನು ಸಂಸ್ಥೆಯ ಅಧ್ಯಯನದಲ್ಲಿ ಕಂಡು ಬಂದಿದ್ದು, ಈ ಕುರಿತು ಸ್ಥಳೀಯ ಸರಕಾರದ ಜನಪ್ರತಿನಿಧಿಗಳಿಗೆ ತರಬೇತಿಗಳು ಮತ್ತು ಮಾರ್ಗದರ್ಶನಗಳನ್ನು ನೀಡುವುದು ಅಗತ್ಯವಾಗಿದೆ.

ಶಿಕ್ಷಣ ಹಕ್ಕು ಕಾಯಿದೆ ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವಿಶೇಷವಾಗಿ ಶಾಲಾ ಶಿಕ್ಷಣವನ್ನು ಒದಗಿಸುತ್ತದೆ. ಆರ್.ಟಿ.ಇ ಕಾಯ್ದೆಯ ಮುಖ್ಯ ಉದ್ದೇಶ 6–14 ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣನ್ನು ನೀಡಬೇಕು ಮತ್ತು ಶಿಕ್ಷಣವು ಮೂಲಭೂತ ಹಕ್ಕು ಕೂಡ ಹೌದು ಮತ್ತು ರಾಷ್ಟ್ರದ ಪ್ರತಿ ಮಗುವಿಗೆ ಕಡ್ಡಾಯ ಪ್ರವೇಶ, ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದನ್ನು ಖಚಿತ ಪಡಿಸುತ್ತದೆ.

ಪಡಿ ಸಂಸ್ಥೆಯು, ಕರ್ನಾಟಕದ 11 ಜಿಲ್ಲೆಯ 34 ಗ್ರಾಮ ಪಂಚಾಯತ್ ವ್ಯಾಪ್ತಿಯ 112 ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ – 2009 ಸೆಕ್ಷನ್ 9 ಮತ್ತು ಸೆಕ್ಷನ್ 21ಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಪ್ರಸ್ತುತ ಕೆಲಸ ಮಾಡುತ್ತಿದೆ. ಅದರಲ್ಲೂ ಪ್ರಮುಖವಾಗಿ ಗ್ರಾಮಪಂಚಾಯತ್ ಮತ್ತು ಎಸ್.ಡಿ.ಎಮ್.ಸಿ ಸದಸ್ಯರಿಗೆ ನಾಲ್ಕು ಹಂತದ ತರಬೇತಿ ಕಾರ್ಯಕ್ರಮ, ಮಕ್ಕಳ ಹಕ್ಕುಗಳು ಮತ್ತು ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ, ಗ್ರಾಮ ಪಂಚಾಯತ್ ಸಹಯೋಗದೊಂದಿಗೆ ಮಕ್ಕಳ ಹಕ್ಕುಗಳ ಸಪ್ತಾಹ ಕಾರ್ಯಕ್ರಮ, ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಬಲವರ್ಧನೆ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ರಚನೆ, ಅರಿವು ಕಾರ್ಯಕ್ರಮ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನಾ ಸಭೆಗಳು ಮತ್ತು ವಕಲಾತ್ತು ಪ್ರಕ್ರಿಯೆಗಳು, ಶಿಕ್ಷಣ ಹಕ್ಕು ಕಾಯಿದೆಯ ಕುರಿತು ಜಿಲ್ಲಾ ಮಟ್ಟದ ಸಮಾಲೋಚನಾ ಸಭೆಗಳು, ಪಂಚಾಯತ್ ಸುಗಮಕಾರರಿಗೆ ತರಬೇತಿ ಕಾರ್ಯಕ್ರಮಗಳು, ರಾಜ್ಯ ಮಟ್ಟದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಕಾರ್ಯಗಾರಗಳು ಮತ್ತು ವಕಾಲತ್ತು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಖ್ಯವಾಗಿ ಕರ್ನಾಟಕದ 11 ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಮಂಡ್ಯ, ರಾಮನಗರ, ದಾವಣಗೆರೆ, ರಾಯಚೂರು, ಕೊಪ್ಪಳ, ಬೆಳಗಾವಿ, ಬಾಗಲಕೋಟೆ, ಕೊಡಗು) ಜಿಲ್ಲೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆ –2009ರ ಸೆಕ್ಷನ್ 9 ಮತ್ತು ಸೆಕ್ಷನ್ 21ರ ಸಮರ್ಪಕವಾಗಿ ಅನುಷ್ಠಾನ ಮಾಡುವಲ್ಲಿ ಕಾರ್ಯಪ್ರವೃತ್ತವಾಗಿದೆ.

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ಯೋಜನೆಯ ಸಂಕ್ಷಿಪ್ತ ಪರಿಚಯ

2023–24, 2024–25, 2025–26ನೇ ಸಾಲಿನಲ್ಲಿ ಪಡಿ ಸಂಸ್ಥೆಯು ಸರಕಾರಿ ಶಾಲೆಗಳಲ್ಲಿ ಗುಣಮಟ್ಟ ಶಿಕ್ಷಣಕ್ಕಾಗಿ ಸ್ಥಳೀಯ ಸರಕಾರಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹೊಸ ಚಿಂತನೆಯನ್ನು ಆರಂಭಿಸಿರುವುದು ಹಾಗೂ ಸ್ಥಳೀಯ ಪ್ರಾಧಿಕಾರಗಳ ಸಬಲೀಕರಣಕ್ಕಾಗಿ ಚುನಾಯಿತ ಸದಸ್ಯರಿಗೆ ವಿವಿಧ ರೀತಿಯ ತರಬೇತಿ ಆಯೋಜನೆ. ಸರಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಸ್ಥಳೀಯ ಪ್ರಾಧಿಕಾರಗಳ ಮಾಲಕತ್ವದಲ್ಲಿ ನಡೆಯುವಂತೆ ಪ್ರೋತ್ಸಾಹಿಸುವುದಾಗಿದೆ. ಇದಕ್ಕಾಗಿ ಕರ್ನಾಟಕ ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಮತ್ತು ಸ್ಥಳೀಯ ಶಾಲೆಯ ಮಕ್ಕಳು ಪೋಷಕರು ಎಸ್.ಡಿ.ಎಮ್.ಸಿ ಸಮುದಾಯ ಶಿಕ್ಷಣ ಇಲಾಖೆ ಸಮಾನ ಮನಸ್ಕ ಸಂಘ ಸಂಸ್ಥೆಗಳ ಜಾಲಗಳನ್ನು ಒಳಗೊಳ್ಳುವಿಕೆಗಾಗಿ ವಿವಿಧ ಕಾರ್ಯಕ್ರಮಗಳು ತರಬೇತಿ, ವಕಾಲತ್ತು, ಸ್ಥಳೀಯ ಆರ್ಥಿಕ ಮತ್ತು ಮಾನವ ಸಂಪನ್ಮೂಲ ಬಳಕೆಗಳನ್ನು ನಿರ್ವಹಿಸುವಲ್ಲಿ ಪಡಿ ಹಾಗೂ ಕರ್ನಾಟಕ ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ಸರ್ವಸಮ್ಮತ ಹಾಗೂ ಸಹಕಾರದೊಂದಿಗೆ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ರಾಜ್ಯದ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವಂತಾಗಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡು 2009 ರಲ್ಲಿ ಜಾರಿಗೆ ಬಂದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯ ಅಧ್ಯಾಯ–3 ಸೆಕ್ಷನ್–9 ಮತ್ತು ಅಧ್ಯಾಯ–4 ಸೆಕ್ಷನ್–21ರಲ್ಲಿ ತಿಳಿಸಿರುವ ಗ್ರಾಮ ಪಂಚಾಯತ್ ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಜವಾಬ್ದಾರಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವುದು.









## ಗ್ರಾಮ ಪಂಚಾಯತ್ ಮತ್ತು ಶಾಲೆಯ ಮೂಲ ಮಾಹಿತಿ ಸಂಗ್ರಹ

ಆಯ್ದ ಜಿಲ್ಲೆಯ ವಾಸ್ತವ ಸ್ಥಿತಿಗತಿಗಳನ್ನು ಅರ್ಥಮಾಡಿ-ಕೊಳ್ಳಲು ಮತ್ತು ಸ್ಥಳೀಯ ಸಮಸ್ಯೆಗಳನ್ನು ಅರಿತುಕೊಳ್ಳಲು ಮತ್ತು ವಾಸ್ತವ ಸ್ಥಿತಿ ಅಧ್ಯಯನದ ನಮೂನೆಯ ಕುರಿತು ಸಲಹೆಗಳನ್ನು ಪಡೆದುಕೊಳ್ಳಲು, ವಾಸ್ಥವ ಸ್ಥಿತಿಗಳ ಅಧ್ಯಯನವನ್ನು ಯಾವ ಸಂದರ್ಭದಲ್ಲಿ ಆಯೋಜಿಸುವ ಕುರಿತು, ಪಂಚಾಯತು ಸುಗಮಕಾರರಿಗೆ ಸಭೆಯನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಪಡಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ನಡೆಸಿಕೊಟ್ಟರು,



ಈ ಸಂದರ್ಭದಲ್ಲಿ ಪಡಿ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತಿ ಇದ್ದರು.

## ಗ್ರಾಮ ಪಂಚಾಯತ್ ಮತ್ತು ಶಾಲೆಯ ಮೂಲ ಮಾಹಿತಿ ಅಧ್ಯಯನದ ನಮೂನೆಯ ಕುರಿತು ತರಬೇತಿ ಕಾರ್ಯಗಾರ



ಶಿಕ್ಷಣ ಹಕ್ಕು ಕಾಯಿದೆ – 2009ರ ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಗ್ರಾಮಪಂಚಾಯತ್ ಮತ್ತು ಶಾಲೆಯ ಮೂಲ ಮಾಹಿತಿ ಅಧ್ಯಯನದ ನಮೂನೆಯ ಕುರಿತು 11 ಜಿಲ್ಲೆಯ ಒಟ್ಟು 40 ಸಮೀಕ್ಷೆದಾರರಿಗೆ ತರಬೇತಿಯನ್ನು ದಿನಾಂಕ : 05–02–2023ರಂದು ಐ.ಎಸ್.ಡಿ ನಂತೂರು ಪದವುನಲ್ಲಿ ನಡೆಸಲಾಯಿತು.

**ಮೂಲ ಮಾಹಿತಿ ಸಂಗ್ರಹ:** ಪಡಿ ಸಂಸ್ಥೆ, ಕರ್ನಾಟಕದ ನಾಲ್ಕು ವಿಭಾಗದ 11 ಜಿಲ್ಲೆಗಳ 34 ಗ್ರಾಮ ಪಂಚಾಯತ್ ಮತ್ತು ಪಂಚಾಯತ್ ವ್ಯಾಪ್ತಿಯ 112 ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನದ ಕುರಿತು ವಾಸ್ತವ ಸ್ಥಿತಿಗತಿಗಳ ಅಧ್ಯಯನವನ್ನು ನಡೆಸಲಾಗಿದೆ.

## ಗ್ರಾಮ ಪಂಚಾಯತ್ ಸದಸ್ಯರಿಗೆ ಮತ್ತು ಉಪಸಮಿತಿ ಸದಸ್ಯರಿಗೆ ಮೊದಲ ಹಂತದ ತರಬೇತಿ ಕೈಪಿಡಿ ರಚನೆ ಕುರಿತು ಪೂರ್ವಭಾವಿ ಸಭೆ

ಶಿಕ್ಷಣ ಹಕ್ಕು ಕಾಯಿದೆ – 2009 ಸಮರ್ಪಕವಾಗಿ ಅನುಷ್ಠಾನವಾಗಬೇಕಾದರೆ, ಸ್ಥಳೀಯ ಸರಕಾರಗಳ ಬಲವರ್ದನೆ ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಬಲಗೊಳಿಸುವ ಮೂಲಕ ಶಾಲೆಗಳಲ್ಲಿ ಎಲ್ಲಾ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಾಧ್ಯ ಮತ್ತು ಸ್ಥಳೀಯ ಸರಕಾರ ಮತ್ತು ಸಮುದಾಯದ ಒಳಗೊಳ್ಳುವಿಕೆಯಿಂದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮಕ್ಕಳಿಗೆ ಕಲ್ಪಿಸಿಕೊಡಲು ಸಾಧ್ಯ ಅಲ್ಲದೆ ಮಕ್ಕಳ ರಕ್ಷಣೆ, ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಲು



ಸಾಧ್ಯ. ಈ ಉದ್ದೇಶದಿಂದ ತಜ್ಞರು ಮತ್ತು ಪಡಿ ಸಿಬ್ಬಂದಿಯವರ ಜೊತೆ ಸೇರಿ ಕರಡು 'ತಳ' ತರಬೇತಿ ಕೈಪಿಡಿಯನ್ನು ತಯಾರಿಸಲಾಯಿತು.

## ಗ್ರಾಮ ಪಂಚಾಯತ್ ಸುಗಮಕಾರರಿಗೆ ಪಂಚಾಯತ್ ರಾಜ್ ಕಾಯಿದೆ ಇತಿಹಾಸ ಮತ್ತು ಶಿಕ್ಷಣ ಹಕ್ಕು ಕಾಯಿದೆ –2009ರ ಸೆಕ್ಷನ್ 9 ಮತ್ತು 21 ಕುರಿತು ಮೊದಲ ಹಂತದ ತರಬೇತಿ ಕಾರ್ಯಗಾರ

ಗ್ರಾಮ ಪಂಚಾಯತ್ ಸುಗಮಕಾರರಿಗೆ, ಪಂಚಾಯತ್ ರಾಜ್ ಕಾಯಿದೆ–1993 ಮತ್ತು ಶಿಕ್ಷಣ ಹಕ್ಕು ಕಾಯಿದೆ–2009ರ ಕುರಿತು, ಕರ್ನಾಟಕ ರಾಜ್ಯದ 11 ಜಿಲ್ಲೆಗಳ ಪಂಚಾಯತ್ ಸುಗಮಕಾರರಿಗೆ ದಿನಾಂಕ: 04–02–2024 ರಿಂದ 05–02–2024ರಂದು ತರಬೇತಿಯನ್ನು ಐ.ಎಸ್.ಡಿ. ನಂತೂರು ಪದವು ಕಾಲೇಜ್ ಹತ್ತಿರ ಮಂಗಳೂರು ಇಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಆಯ್ದ ಜಿಲ್ಲೆಯ ಒಟ್ಟು 30 ಪಂಚಾಯತ್ ಸುಗಮಕಾರರು ಭಾಗವಹಿಸಿದ್ದರು. ಈ ತರಬೇತಿಯನ್ನು ಶ್ರೀ ವಿಲ್‌ಫ್ರೆಡ್ ಡಿಸೋಜ, ತಜ್ಞರು ಪಂಚಾಯತ್ ರಾಜ್ ಇವರು ಸುಗಮಕಾರರಿಗೆ ತರಬೇತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಪಂಚಾಯತ್ ಸುಗಮಕಾರರ ಆಯ್ಕೆ ಪ್ರಕ್ರಿಯೆಯನ್ನು



ನಡೆಸಲಾಯಿತು. ಆಯ್ಕೆ ಪ್ರಕ್ರಿಯೆಯನ್ನು ಪರೀಕ್ಷೆ ನಡೆಸುವುದರ ಕುರಿತು ಆಯ್ಕೆ ಮಾಡಲಾಯಿತು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮಾತ್ರ ಗ್ರಾಮ ಪಂಚಾಯತ್ ಸದಸ್ಯರಿಗೆ ಮತ್ತು ಉಪಸಮಿತಿಯವರಿಗೆ ತರಬೇತಿಯನ್ನು ನೀಡಲು ಅರ್ಹರಾಗಿರುತ್ತಾರೆ.

## ಗ್ರಾಮ ಪಂಚಾಯತ್ ಸದಸ್ಯರಿಗೆ ಮತ್ತು ಉಪ ಸಮಿತಿ ಸದಸ್ಯರಿಗೆ ಮೊದಲ ಹಂತದ ತರಬೇತಿ ಕಾರ್ಯಗಾರ

ಪಡಿ ಸಂಸ್ಥೆ ಮಂಗಳೂರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆಯ ಸಹಭಾಗಿತ್ವದೊಂದಿಗೆ ಕರ್ನಾಟಕ ನಾಲ್ಕು ವಿಭಾಗದ 11 ಜಿಲ್ಲೆಯ ಆಯ್ದ 34 ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರಿಗೆ ಮತ್ತು ಉಪ ಸಮಿತಿಯ ಸದಸ್ಯರಿಗೆ ಪಂಚಾಯತ್ ರಾಜ್ ಕಾಯಿದೆ–1993 ಮತ್ತು ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 9 ಮತು 21ರ ಕುರಿತು ತರಬೇತಿಯನ್ನು ನೀಡಲಾಯಿತು. ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಪಡಿ ಸಂಸ್ಥೆಯ ತರಬೇತಿ ಕಾರ್ಯಕ್ರಮ ಬಹಳಷ್ಟು ಸಹಾಯಕಾರಿಯಾಗಿದೆ ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು ಗ್ರಾಮ ಪಂಚಾಯತ್ ಕರ್ತವ್ಯವಾಗಿದೆ, ಪಡಿ ಸಂಸ್ಥೆಯ ವತಿಯಿಂದ ಸಾಕಷ್ಟು ಕಾರ್ಯಕ್ರಮಗಳನ್ನು ಈಗಾಗಲೇ ನಮ್ಮ ಗ್ರಾಮ ಪಂಚಾಯತ್‌ನಲ್ಲಿ ನಡೆದಿದೆ ಮತ್ತು ಕಾರ್ಯಕ್ರಮ ಯಶಸ್ಸನ್ನು ಕಂಡುಕೊಂಡಿದೆ.

ಪಡಿ ಸಂಸ್ಥೆಯ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಚುನಾಯಿತ ಸದಸ್ಯರಿಗೆ ಮತ್ತು ಉಪ ಸಮಿತಿ ಸದಸ್ಯರಿಗೆ " ಪಂಚಾಯತ್ ರಾಜ್ ಕಾಯಿದೆ –1993 ಮತ್ತು ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 9 ಮತು 21ರ ಕುರಿತು ಬಗ್ಗೆ ತರಬೇತಿ ನೀಡಿದರು ಮತ್ತು ಈ ಸಂದರ್ಭದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 9ರಲ್ಲಿ ತಿಳಿಸಿರುವ ಸ್ಥಳೀಯ ಸರಕಾರದ ಜವಾಬ್ದಾರಿಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಲಾಯಿತು ಮತ್ತು ಪಂಚಾಯತ್ ಸೂಚನ ಫಲಕದಲ್ಲಿ ಅಳವಡಿಸಲಾಗಿದೆ.

**ಉದ್ದೇಶ:** ಗ್ರಾಮ ಪಂಚಾಯತ್ ಚುನಾಯಿತ ಸದಸ್ಯರು ಮತ್ತು ಉಪಸಮಿತಿಯ ಸದಸ್ಯರು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಅರಿತು ಕೊಂಡು, ಶಿಕ್ಷಣ ಹಕ್ಕು ಕಾಯಿದೆ–2009ನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವಲ್ಲಿ ಕಾರ್ಯಪ್ರವೃತ್ತರಾಗುತ್ತಾರೆ.



## ಮಕ್ಕಳ ಹಕ್ಕುಗಳ ಸಪ್ತಾಹ – 2023



ಮಕ್ಕಳು ಮಕ್ಕಳಾಗಿ ಬದುಕಬೇಕಾದರೆ ಅವರು ಮಕ್ಕಳಾಗಿಯೇ ಇರಬೇಕು. ಅವರು ಹಾಗೆ ಇರಬೇಕಾದರೆ ಅವರಿಗೆ ಅವರದ್ದೇ ಆದ ಹಕ್ಕುಗಳನ್ನು ಅನುಭವಿಸಲು ಬಿಡಬೇಕು. ಮಕ್ಕಳ ಹಕ್ಕುಗಳನ್ನು ನೇರವಾಗಿ ಮಕ್ಕಳು ಅರ್ಥಮಾಡಿಕೊಳ್ಳುವ ಹಾಗೆ ಮಕ್ಕಳ ಹಕ್ಕುಗಳ ಸಪ್ತಾಹ 2023 ಒಂದು ವಾರದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸ್ಥಳೀಯ ಸರಕಾರ ಮತ್ತು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕರ್ನಾಟಕ ರಾಜ್ಯದ ಆಯ್ದ 11 ಜಿಲ್ಲೆಗಳಲ್ಲಿನ ಆಯ್ದ 34 ಗ್ರಾಮ ಪಂಚಾಯಿತ್ ವ್ಯಾಪ್ತಿಯಲ್ಲಿ ಒಳಪಟ್ಟಿರುವ 112 ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಮಕ್ಕಳ ಹಕ್ಕುಗಳ ಸಪ್ತಾಹ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಂಡು ಕಾರ್ಯಕ್ರಮ ನಡೆಸಲಾಯಿತು.

ಮಕ್ಕಳ ಹಕ್ಕುಗಳ ಮಾಸೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಸ್ಥಳೀಯ ಸರಕಾರ / ಗ್ರಾಮ ಪಂಚಾಯಿತಿಯ ನೇತೃತ್ವದ ಮೂಲಕ ಉದ್ಘಾಟಿಸಿ ಒಂದು ವಾರದ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿ ಆಯ್ದ 112 ಶಾಲೆಗಳಲ್ಲಿ ನಾಲ್ಕು ದಿನದ ಕಾರ್ಯಕ್ರಮಗಳನ್ನು ಹಾಗೂ ಚಟುವಟಿಕೆ ನಡೆಸಿಕೊಡಲಾಯಿತು. ಈ ಕಾರ್ಯಕ್ರಮದಲ್ಲಿ ಮೊದಲನೇ ದಿನ ಪೋಕ್ಸೋ ಕಾಯ್ದೆ, ಮೊಬೈಲ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮ ಹಾಗೂ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ನೀಡಲಾಯಿತು.

ಒಂದರಿಂದ ನಾಲ್ಕನೇ ತರಗತಿಯ ಮಕ್ಕಳಿಗೆ ನಮ್ಮ ಸುಂದರ ಶಾಲೆ ಹಾಗೂ ಐದರಿಂದ ಎಂಟನೇ ತರಗತಿಯ ಮಕ್ಕಳಿಗೆ ಮಗು ಸ್ನೇಹಿ ಶಾಲೆಯ ಕಲ್ಪನೆಯನ್ನು ವಿವರಿಸಿ ಚಿತ್ರ ಕಲೆ ಸ್ಪರ್ಧೆ ಏರ್ಪಾಡಿಸಲಾಯಿತು. ಮೂರನೇ ದಿನದಂದು ಸಂವಿಧಾನದ ಬಗ್ಗೆ ಪ್ರಬಂಧ, ಘೋಷಣಾ ವಾಕ್ಯಗಳನ್ನು ಮಕ್ಕಳಿಂದ ಬರೆಸಲಾಯಿತು. ಕೊನೆಯದಾಗಿ ಸಮರೋಪ ಕಾರ್ಯಕ್ರಮವನ್ನು ಆಯೋಜಿಸಿ ಮಕ್ಕಳ ಗ್ರಾಮ ಸಭೆಯ ಮಹತ್ವವನ್ನು ಮಕ್ಕಳಿಗೆ ವಿವರಿಸಲಾಯಿತು.

ಕಾರ್ಯಕ್ರಮದ ಕೊನೆಯ ಹಂತದಲ್ಲಿ ಸ್ಪರ್ಧೆಯಲ್ಲಿ ವಿಜೇತರದ ಮಕ್ಕಳಿಗೆ ಬಹುಮಾನ ನೀಡಲಾಯಿತು. ನಲಿಕಲಿ ಮಕ್ಕಳಿಗೆ ಬಣ್ಣದ ಬಳಪ (ಕ್ರೈಯಾನ್ಸ್) ಹಾಗೂ ಪಡಿ ಸಂಸ್ಥೆಯಿಂದ ನಿರ್ಮಿಸಿದ ಮಕ್ಕಳ ಹಕ್ಕು ಮತ್ತು ರಕ್ಷಣೆಯ ಮಾಹಿತಿಯನ್ನು ಒಳಗೊಂಡ ಕ್ಯಾಲೆಂಡರ್ ಹಾಗೂ ಮಕ್ಕಳ ಹಕ್ಕುಗಳ ಮಾಹಿತಿ ನೀಡಲಾಯಿತು.

---

## ಶಿಕ್ಷಣ ಹಕ್ಕು ಕಾಯಿದೆ ಮತ್ತು ಮಕ್ಕಳ ವೈಯಕ್ತಿಕ ದಾಖಲೆಯ ಮಹತ್ವದ ಕುರಿತು ಸಮುದಾಯ ಮತ್ತು ಪೋಷಕರಿಗೆ ಅರಿವು ಕಾರ್ಯಕ್ರಮ

ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಸ್ಥಳೀಯ ಸರಕಾರ ಮತ್ತು ಸಮುದಾಯದ ಪಾತ್ರ ಪ್ರಮುಖವಾಗಿದೆ. ಸ್ಥಳೀಯ ಸರಕಾರ, ಸಮುದಾಯ ಮತ್ತು ಸಮುದಾಯಾಧಾರಿತ ಸಂಸ್ಥೆಗಳು ಶಿಕ್ಷಣ ಹಕ್ಕು ಕಾಯಿದೆಯನ್ನು ಅರಿತು ಕೊಂಡರೆ, ಆ ಗ್ರಾಮದಲ್ಲಿರುವ ಎಲ್ಲಾ ಮಕ್ಕಳು ಶಿಕ್ಷಣ ಹಕ್ಕು ಕಾಯಿದೆಯಲ್ಲಿರುವ ಸೌಲಭ್ಯಗಳನ್ನು ಪಡೆದುಕೊಳ್ಳುವುದಲ್ಲದೆ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆಯಲಿಕ್ಕೆ ಸಾಧ್ಯ. ಮಗುವನ್ನು ಉತ್ತಮ ಹಾಗೂ ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವಲ್ಲಿ ಸ್ಥಳೀಯ ಸರಕಾರ, ಸಮುದಾಯ ಮತ್ತು ಸಮುದಾಯಾಧಾರಿತ ಸಂಸ್ಥೆಗಳ ಮಹತ್ವದ ಪಾತ್ರ ಇದೆ. ಆದುದರಿಂದ ಪಡಿ ಸಂಸ್ಥೆ ಶಿಕ್ಷಣ ಹಕ್ಕು ಕಾಯಿದೆ–2009ರ ಕುರಿತು ಪ್ರತಿಯೊಬ್ಬ ನಾಗರಿಕನು ತಿಳಿದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕರ್ನಾಟಕದ 4 ವಿಭಾಗದ 34 ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ಸನ್ನು ಕಂಡುಕೊಳ್ಳುತ್ತಿದೆ.

## ಉದ್ದೇಶ

- ಸಮುದಾಯ ಮತ್ತು ಸಮುದಾಯಾಧರಿತ ಸಂಸ್ಥೆಗಳು ಗ್ರಾಮ ಪಂಚಾಯತ್ ಮಟ್ಟದ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.
- ಸಮುದಾಯ ಮತ್ತು ಸಮುದಾಯಾಧರಿತ ಸಂಸ್ಥೆಗಳು, ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನಕ್ಕಿರುವ ಸವಾಲುಗಳನ್ನು ಗುರುತಿಸುತ್ತಾರೆ.
- ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ ಭಾಗವಹಿಸಿ, ಶಿಕ್ಷಣ ಹಕ್ಕು ಕಾಯಿದೆ-2009 ನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ವಿಷಯವಾಗಿ ಚರ್ಚಿಸುತ್ತಾರೆ.

## ಮಕ್ಕಳ ವೈಯಕ್ತಿಕ ದಾಖಲೆಯ ಮಹತ್ವದ ಕುರಿತು ಪೋಷಕರಿಗೆ ಮತ್ತು ಸಮುದಾಯಕ್ಕೆ ಅರಿವು ಕಾರ್ಯಕ್ರಮ

ವೈಯಕ್ತಿಕ ದಾಖಲೆಗಳು ಇರುವುದರ ಕುರಿತು ವಾರ್ಡ್ ಮಟ್ಟದಲ್ಲಿ, ಪಂಚಾಯತ್ ವಾರ್ಡ್ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ದಾಖಲಾತಿ ಇಲ್ಲದೆ ಇರುವ ಮಕ್ಕಳನ್ನು ಗುರುತಿಸಿ ಆ ಮಕ್ಕಳಿಗೆ ದಾಖಲೆಗಳು ಸಿಗುವಂತೆ ಗ್ರಾಮ ಪಂಚಾಯತ್ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯತ್ ತಮ್ಮ ವ್ಯಾಪ್ತಿಯ ಎಲ್ಲಾ ಮಕ್ಕಳು ತಮ್ಮ ವೈಯಕ್ತಿಕ ದಾಖಲೆಯನ್ನು ಹೊಂದಿದ್ದಾರೆ ಎಂದು ಘೋಷಣೆ ಮಾಡುವುದು ಮತ್ತು ಈ ಕುರಿತು ಶಾಲೆ, ಅಂಗನವಾಡಿ ಮತ್ತು ಪದವಿ ಪೂರ್ವ ಕಾಲೇಜಿನ ಹಂತದಲ್ಲಿ, ಯಾವ ಮಕ್ಕಳಿಗೆ ವೈಯಕ್ತಿಕ ದಾಖಲೆಗಳು ಇಲ್ಲವೋ ಅಂತಹ ಮಕ್ಕಳಿಗೆ ವೈಯಕ್ತಿಕ ದಾಖಲೆಗಳನ್ನು ನೀಡುವ ಕೆಲಸವನ್ನು ಗ್ರಾಮ ಪಂಚಾಯತ್ ಮಾಡಬೇಕಿದೆ. ಈ ನಿಟ್ಟಿನಲ್ಲಿ ಪಡಿ ಸಂಸ್ಥೆ ಮಕ್ಕಳ





ವೈಯಕ್ತಿಕ ದಾಖಲೆಗಳ ಕುರಿತು ಪಂಚಾಯತ್ ವ್ಯಾಪ್ತಿಯ ಎಲ್ಲಾ ಮಕ್ಕಳ ಪೋಷಕರಿಗೆ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ಸನ್ನು ಕಂಡುಕೊಂಡಿದೆ.

## ಅಭಿಯಾನದ ಉದ್ದೇಶ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮಕ್ಕಳು ತಮ್ಮ ವೈಯಕ್ತಿಕ ದಾಖಲೆಗಳನ್ನು ಹೊಂದಬೇಕು ಮತ್ತು ಅವರಿಗೆ ದೊರಕುವ ಎಲ್ಲಾ ಮೂಲಭೂತ ಸೌಕರ್ಯಗಳು ಮತ್ತು ಎಲ್ಲಾ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದು ಈ ಅಭಿಯಾನದ ಉದ್ದೇಶವಾಗಿದೆ.





## ಬುನಾದಿ ಶಿಕ್ಷಣದ ಅಧ್ಯಯನ ಕಾರ್ಯಗಾರ

ಬುನಾದಿ ಶಿಕ್ಷಣದ ಅಧ್ಯಯನದ ರೂಪುರೇಷೆ ಮತ್ತು ಅಧ್ಯಯನದ ಸಾಧನ ತಯಾರಿ ಕುರಿತಾದ ಎರಡು ದಿನಗಳ ಕಾರ್ಯಗಾರ ಪಡಿ ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರ ಮಂಗಳೂರು (ಡಯೆಟ್) ಇದರ ಸಹಯೋಗದೊಂದಿಗೆ ದಿನಾಂಕ 24-06-2024 ಮತ್ತು 25-06-2024ರಂದು ಡಯೆಟ್ ಮಂಗಳೂರು ಇಲ್ಲಿ ನಡೆಯಿತು.

ಮೊದಲ ದಿನದ ಕಾರ್ಯಗಾರದಲ್ಲಿ ರಾಜ್ಯದ ಅಂಗನವಾಡಿಗಳ ಕಾರ್ಯ ವೈಖರಿ ಮತ್ತು ಪ್ರಸುತ್ತ ಸ್ಥಿತಿ-ಗತಿಗಳ ಬಗ್ಗೆ ಚರ್ಚಿಸಲಾಯಿತು.



## ಶಿಕ್ಷಣ ಹಕ್ಕು ಕಾಯಿದೆ -2009ರ ಸಮರ್ಪಕ ಅನುಷ್ಠಾನದ ಕುರಿತು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ಸಭೆ

ಶಿಕ್ಷಣ ಹಕ್ಕು ಕಾಯಿದೆ-2009ರ ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಡಿ.ಎಸ್.ಇ.ಆರ್.ಟಿ ಅಧಿಕಾರಿಗಳೊಂದಿಗೆ ದಿನಾಂಕ:12-08-2023 ರಂದು ನಡೆಯಿತು. ಈ ಸಂದರ್ಭದಲ್ಲಿ ಪಡಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು 2020-23ನೇ ಸಾಲಿನ ಯೋಜನೆಯ ಅನುಷ್ಠಾನದ ವರದಿಯನ್ನು ಅಧಿಕಾರಿಗಳ ಮುಂದೆ ಪ್ರಸ್ತಾಪ ಮಾಡಿದರು. ಮುಖ್ಯವಾಗಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕಾದರೆ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಬಲವರ್ದನೆಯಾಗಬೇಕು ಇದಕ್ಕಾಗಿ ಶಾಲಾ



ಎಸ್.ಡಿ.ಎಮ್.ಸಿ ಯವರಿಗೆ ಕ್ಲಸ್ಟರ್ ಹಂತದ ತರಬೇತಿಯ ಬದಲು ಶಾಲಾ ಹಂತದ ತರಬೇತಿಯನ್ನು ನೀಡಬೇಕು ಎಂದು ಹೇಳಿದರು.

## ಶಿಕ್ಷಣ ಹಕ್ಕು ಕಾಯಿದೆ-2009ರ ಸಮರ್ಪಕವಾಗಿ ಅನುಷ್ಠಾನ ಮಾಡುವಲ್ಲಿ ಮಾನ್ಯ ಆಯುಕ್ತರು ಪಂಚಾಯತ್ ರಾಜ್ ಇಲಾಖೆ ಇವರನ್ನು ಭೇಟಿ ಮಾಡಿ, ಯೋಜನಾ ಪ್ರಸ್ತಾವನೆಯನ್ನು ನೀಡಲಾಯಿತು.



## ಶಿಕ್ಷಣ ಹಕ್ಕು ಕಾಯಿದೆ–2009ರ ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ವಿವಿಧ ನೆಟ್‌ವರ್ಕ್‌ಗಳ ಜೊತೆ ಜಿಲ್ಲಾಮಟ್ಟದ ಸಮಾಲೋಚನ ಸಭೆ

ಸ್ಥಳೀಯ ಸರಕಾರಗಳ ಮೂಲಕ ಶಿಕ್ಷಣ ಹಕ್ಕು ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸಲು ಶಾಲಾ ಆಧಾರಿತ ಎಸ್.ಡಿ.ಎಮ್.ಸಿ ತರಬೇತಿಯ ಮಹತ್ವವನ್ನು ಅರ್ಥಮಾಡಿಕೊಂಡು ನಗರ ಪ್ರದೇಶದ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಶಿಕ್ಷಣದ ಮೂಲಕ ಸರ್ವಾಂಗೀಣ ಅಭಿವೃದ್ಧಿಯನ್ನು ಖಾತರಿಗೊಳಿಸುವುದು ಅತೀ ಅಗತ್ಯವಾಗಿದೆ.



ಪಡಿ ಸಂಸ್ಥೆಯು ಜಿಲ್ಲಾವಾರು ವಿವಿಧ ಸಂಘ ಸಂಸ್ಥೆಗಳ ಜೊತೆ ಶಿಕ್ಷಣ ಹಕ್ಕು ಕಾಯಿದೆ–2009ರ ಸಮರ್ಪಕ ಅನುಷ್ಠಾನದ ಕುರಿತು ಜಿಲ್ಲಾ ಮಟ್ಟದ ಸಮಾಲೋಚನೆ ಸಭೆಗಳನ್ನು 11 ಜಿಲ್ಲೆಗಳಲ್ಲಿ ಆಯೋಜಿಸಲಾಗಿದ್ದು, ಈ ಸಮಾಲೋಚನೆ ಸಭೆಯಲ್ಲಿ ಕಂಡುಕೊಂಡ ಅಂಶಗಳ ವಿಚಾರವಾಗಿ ರಾಜ್ಯಮಟ್ಟದಲ್ಲಿ ವಿವಿಧ ನೆಟ್‌ವರ್ಕ್‌ಗಳು ಮತ್ತು ಶಿಕ್ಷಣಾಸಕ್ತರ ಜೊತೆ ಸಂವಾದ ನಡೆಸಿ, ಇಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಮುಂದಿನ ಹಂತದಲ್ಲಿ ಸಂಬಂಧಪಟ್ಟ ಇಲಾಖೆ, ಜನ ಪ್ರತಿನಿಧಿಗಳು, ಶಾಸಕರು, ಸಚಿವರೊಂದಿಗೆ ವಕಲತ್ತು ಮಾಡಿ ಸರಕಾರಿ ಶಾಲೆಗಳಲ್ಲಿ ಮತ್ತು ಸ್ಥಳೀಯ ಸರಕಾರಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆ–2009ರ ಸಮರ್ಪಕ ಅನುಷ್ಠಾನವನ್ನು ಖಾತ್ರಿಗೊಳಿಸುವುದು ಜಿಲ್ಲಾ ಮಟ್ಟದ ಈ ಸಮಾಲೋಚನಾ ಸಭೆಯ ಮುಖ್ಯ ಉದ್ದೇಶವಾಗಿದೆ. ಒಟ್ಟು 11 ಜಿಲ್ಲೆಗಳಲ್ಲಿ ಸಂಘಸಂಸ್ಥೆ ಮತ್ತು ನೆಟ್‌ವರ್ಕ್‌ಗಳು ಭಾಗಿಯಾಗಿರುತ್ತಾರೆ.

## ಶಿಕ್ಷಕ ಶಿಕ್ಷಣ ಬಲವರ್ಧನೆ ಸಮಾಲೋಚನ ಸಭೆ

ಶಿಕ್ಷಣದ ಬಲವರ್ಧನೆ ಮತ್ತು ಬುನಾದಿ ಹಂತದ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಪಡಿ ಮಂಗಳೂರು ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಂಗಳೂರು ಸಹಯೋಗದಲ್ಲಿ ಒಂದು ದಿನದ ಸಮಾಲೋಚನಾ ಸಭೆಯು 05–02–2024 ರಂದು ಮಂಗಳೂರಿನ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸಭಾಂಗಣದಲ್ಲಿ ನಡೆಯಿತು. ಡಯಟ್ ಪ್ರಾಂಶುಪಾಲರಾದ ಡಾ.ರಾಜಲಕ್ಷ್ಮೀ ಮತ್ತು ಪಡಿ ಸಂಸ್ಥೆಯ ನಿರ್ದೇಶಕರಾದ ರೆನ್ನಿ ಡಿ'ಸೋಜಾರವರ ನೇತೃತ್ವದಲ್ಲಿ ಈ ಸಮಾಲೋಚನ ಸಭೆ ನಡೆಯಿತು. ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಶಿವಪ್ರಕಾಶ್, ಡಯಟ್ ಉಪನ್ಯಾಸಕರಾದ ಡಾ.ಎನ್. ಕುಮಾರಸ್ವಾಮಿ, ಎಸ್.ಡಿ.ಎಂ. ಕಾಲೇಜು ಪ್ರಾಂಶುಪಾಲರಾದ ಸ್ವಾಮಿ ಕೆ.ಎ. ಮೊದಲಾದವರು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದರು. ಹಮೀದ್ ಮಂಜೇಶ್ವರ ಇವರು ಸಭೆಯನ್ನು



ನಡೆಸಿಕೊಟ್ಟರು. ಪ್ರಮುಖವಾಗಿ ಬುನಾದಿ ಶಿಕ್ಷಣ, ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದ ಬಲವರ್ಧನೆ, ಪೋಷಕರ ಶಿಕ್ಷಣ ಮತ್ತು ಮೌಲ್ಯಮಾಪನ ಈ ನಾಲ್ಕು ಆಯಾಮಗಳಲ್ಲಿ ಚರ್ಚೆ ನಡೆದು ಕೆಲವು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಪ್ರಮುಖವಾಗಿ ನಗರ ಸಭೆ, ಪುರಸಭೆ, ಪಟ್ಟಣ ಅನುಷ್ಠಾನದ ಕುರಿತು ಅಧ್ಯಯನ ನಡೆಸಬೇಕು. ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ರಚಿಸುವುದು ಮತ್ತು ಅನುಷ್ಠಾನ ಮಾಡುವುದು.

# ಮಕ್ಕಳ ಹಕ್ಕುಗಳ ಮಾಸೋತ್ಸವ ಮತ್ತು ವಕಾಲತ್ತು ಕಾರ್ಯಕ್ರಮ

ಪಡಿ ಸಂಸ್ಥೆ ಮಂಗಳೂರು, ಮಕ್ಕಳ ಹಕ್ಕುಗಳ ಮಾಸೋತ್ಸವ ಸಮಿತಿ, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಮಕ್ಕಳ ಹಕ್ಕುಗಳ ಮಾಸೋತ್ಸವ ಕಾರ್ಯಕ್ರಮವನ್ನು ಕುಮಾರಿ ನಂದಾಪಾಯ್ಸ್ ನೇತೃತ್ವದಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಒಟ್ಟು 78 ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 109 ಭಾಗಿದಾರರು ಭಾಗವಹಿಸಿರುತ್ತಾರೆ. ಮಕ್ಕಳು ನೀಡಿರುವ ಒಟ್ಟು 38 ನಿರ್ಣಯಗಳನ್ನು ಕಲೆಹಾಕಿ ಸಂಬಂಧಪಟ್ಟ ಅಧಿಕಾರಿಗಳಿಗೆ, ಶಾಸಕರಿಗೆ ಎಮ್.ಎಲ್.ಸಿ, ಇಲಾಖೆಗಳಿಗೆ ನೀಡುವುದೆಂದು ತೀರ್ಮಾನಿಸಲಾಯಿತು.



### ಉದ್ದೇಶ

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ 2002 ರಿಂದ ವೆಲೊರೆಡ್ ಪರಿಕಲ್ಪನೆಯಲ್ಲಿ, ಮಕ್ಕಳ ಹಕ್ಕುಗಳ ಮಾಸೋತ್ಸವ ಸಮಿತಿ, ಪಡಿ ಮಂಗಳೂರು ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳು, ವಿವಿಧ ಇಲಾಖೆಗಳು, ಸ್ವಯಂಸೇವಾ ಸಂಸ್ಥೆಗಳು, ನಾಗರಿಕ ಸಂಘಟನೆಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಎಸ್.ಡಿ.ಎಮ್.ಸಿ ಸಂಘಟನೆಗಳು ಇವರೆಲ್ಲರ ಸಹಕಾರ ಮತ್ತು ಸಹಭಾಗಿತ್ವದಲ್ಲಿ ಮಕ್ಕಳ ಹಕ್ಕುಗಳ ಮಾಸೋತ್ಸವವನ್ನು ನಡೆಸುತ್ತಾ ಬಂದಿರುತ್ತದೆ. ಅಲ್ಲದೆ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಹಲವಾರು ಬೇಡಿಕೆ ಮತ್ತು ಬದಲಾವಣೆಗೆ ಬೇಕಾದ ಸಲಹೆಗಳನ್ನು ಸರಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಲಾಗಿದೆ. ದ.ಕ ಜಿಲ್ಲೆಯಲ್ಲಿ ಬಿಕ್ಷಾಟನೆ, ಬಾಲಕಾರ್ಮಿಕತೆ, ಮಕ್ಕಳ ಮಾರಾಟ ಸಾಗಾಟ, ಅಂತರ್ಜಾಲ ಸುರಕ್ಷತೆ (ONLINE SAFETY), ಶಿಕ್ಷಣ ವಂಚಿತ ಮಕ್ಕಳು, ವಲಸೆ ಮಕ್ಕಳು, ಅಪ್ರಾಪ್ತ ವಯಸ್ಸಿನಲ್ಲಿ ಮಕ್ಕಳ ಮೇಲಾಗುತ್ತಿರುವ ಅತ್ಯಾಚಾರ, ಲೈಂಗಿಕ ಮತ್ತು ದೈಹಿಕ ಕಿರುಕುಳ, ಇತ್ಯಾದಿಗಳು ನಡೆಯುತ್ತಲೇ ಇದೆ. ಇದಕ್ಕಾಗಿ ಸಮಾನ ಮನಸ್ಕರಾದ ನಾವು ಮಕ್ಕಳ ಹಕ್ಕುಗಳ ರಕ್ಷಣೆ ಮಾಡುವಲ್ಲಿ ಧ್ವನಿಯಾಗಿ ನಿಲ್ಲಬೇಕಿದೆ.

### ವಕಾಲತ್ತು ಕಾರ್ಯಕ್ರಮಗಳು

ಪಡಿ ಸಂಸ್ಥೆ ಮತ್ತು ಮಕ್ಕಳ ಹಕ್ಕುಗಳ ಮಾಸೋತ್ಸವ ಸಮಿತಿ ವತಿಯಿಂದ ಮಕ್ಕಳ ಮಾಸೋತ್ಸವ ಕಾರ್ಯಕ್ರಮದ ನಿರ್ಣಯಗಳನ್ನು, ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷರಿಗೆ ನೀಡಲಾಯಿತು.



### ಬಾಲಕಾರ್ಮಿಕತೆ ನಿರ್ಮೂಲನಕ್ಕೆ ಮಕ್ಕಳ ಮಾಸೋತ್ಸವ ಸಮಿತಿಯ ವತಿಯಿಂದ ಮನವಿ

ಬಾಲಕಾರ್ಮಿಕ ಮತ್ತು ಕಿಶೋರಾವಸ್ಥೆಯ ನಿಯಂತ್ರಣ ಮತ್ತು ನಿಷೇಧ ಕಾಯ್ದೆ–1986ನ್ನು ಅನುಷ್ಠಾನ ಮಾಡುವಂತೆ ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಅವರು ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳ ಮಾಸೋತ್ಸವ ಸಮಿತಿ ವತಿಯಿಂದ ಮನವಿ ನೀಡಲಾಯಿತು.

ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮತ್ತು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ವಲಸೆ ಕಾರ್ಮಿಕರ ಮಕ್ಕಳ ಬಗ್ಗೆ ನಿಗಾವಹಿಸಲು ಸಮರ್ಪಕ ಬಾಲಕಾರ್ಮಿಕ ಮಕ್ಕಳ ಟ್ರ್ಯಾಕಿಂಗ್ ವ್ಯವಸ್ಥೆ ಇಲ್ಲದ ಕಾರಣ ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಾಗಿಲ್ಲ. ಪಂಚಾಯತ್ ಮಟ್ಟದಿಂದ ಟ್ರ್ಯಾಕಿಂಗ್ ವ್ಯವಸ್ಥೆ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ನಿಗವಹಿಸಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಯಿತು. ಮಕ್ಕಳ ಮಾಸೋತ್ಸವ ಸಮಿತಿಯು ಸಹ ಸಂಚಾಲಕಿ ಉಷಾ ನಾಯ್ಕ್ ಪಡಿ ಸಂಸ್ಥೆಯ ವಕಾಲತ್ತು ಸಂಯೋಜಕ ಯೋಗೀಶ್, ತರಬೇತಿ ಸಂಯೋಜಕ ವಿವೇಕ್ ಉಪಸ್ಥಿತರಿದ್ದರು.

## ಮಕ್ಕಳ ಹಕ್ಕುಗಳ ಮಾಸೋತ್ಸವದ ಅಂಗವಾಗಿ ತಗೆದು ಕೊಂಡ ಪ್ರಮುಖ ನಿರ್ಣಯಗಳು

1. ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯನ್ನು 18 ವರ್ಷದ ವರೆಗೆ ವಿಸ್ತರಿಲು ಕಾಯಿದೆ ಸೂಕ್ತ ತಿದ್ದುಪಡಿ ಮಾಡಲು ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸುವುದು.
2. 18 ವರ್ಷದ ಎಲ್ಲಾ ಮಕ್ಕಳು ಶಾಲೆಯಲ್ಲಿದ್ದು-ಕೊಂಡು ಶಿಕ್ಷಣ ಪೂರ್ಣಗೊಳಿಸುವ ನಿಟ್ಟಿನಲ್ಲಿ 18 ವರ್ಷದೊಳಗಿನ ಬಾಲ ಕಾರ್ಮಿಕತೆ-ಯನ್ನು ನಿಷೇಧಿಸಿ ಬಾಲ ಕಾರ್ಮಿಕ ಕಾಯಿದೆಯಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು.
3. ನಗರ ಪ್ರದೇಶದಲ್ಲಿ ಭಿಕ್ಷಾಟನೆ ಸಂಪೂರ್ಣವಾಗಿ ನಿಷೇಧಿಸುವ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಈ ಕುರಿತಾಗಿ ಅಭಿಯಾನ ನಡೆಸಿ ಮಕ್ಕಳ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು.
4. ಬಹುತೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಕರ್ನಾಟಕ ಮಕ್ಕಳ ರಕ್ಷಣಾ ನೀತಿಯು 2016 ರಲ್ಲಿ ಜಾರಿಗೆ ಬಂದಿದ್ದರೂ ಹೆಚ್ಚಿನ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಆಳವಡಿಸಿಲ್ಲವಾದುದರಿಂದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಲು ಕಾಯಿದೆಯಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು
5. ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಮಾದರಿಯಲ್ಲೇ ನಗರ ಸಭೆ,ಪುರಸಭೆಗಳಲ್ಲೂ ಮಕ್ಕಳ ವಾರ್ಡ್ ಸಭೆ ನಡೆಯಬೇಕು.
6. ಶಿಕ್ಷಣ ಇಲಾಖೆಯಿಂದ ಅಂಗನವಾಡಿ ಕಾರ್ಯ-ಕರ್ತರಿಗೆ ನೀಡುತ್ತಿರುವ ಶಿಕ್ಷಣದ ಅನುಷ್ಠಾನದ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುವ ಜವಬ್ದಾರಿಯನ್ನು ಶಿಕ್ಷಣ ಇಲಾಖೆ ವಹಿಸಿ-ಕೊಳ್ಳಬೇಕು.
7. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಎಸ್.ಡಿ.ಎಮ್.ಸಿ ಸದ್ಯಸರಿಗೆ ಶಾಲಾ ಹಂತದಲ್ಲಿ ನೀಡಲಾಗುವ ನಿರಂತರ 4 ದಿನಗಳ ಸಭೆಯ ಬದಲು ಹಂತ ಹಂತವಾಗಿ ಅಂದರೆ ಕನಿಷ್ಠ 3 ತಿಂಗಳಿಗೊಮ್ಮೆ ಒಂದು ದಿನದ ತರಬೇತಿಯನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಆಯೋಜಿಸು-ವಂತೆ ಕ್ರಮ ಕೈಗೊಳ್ಳುವುದು. ಪ್ರತಿ ತರಬೇತಿಗೆ ನಿಗದಿತ ಬಜೆಟ್ ವ್ಯವಸ್ಥೆ ಮಾಡುವುದು
8. ಶಿಕ್ಷಣ ಹಕ್ಕು ಕಾಯ್ದೆಯ ಅಧ್ಯಾಯ-5ರ ಸೆಕ್ಷನ್29 ನ್ನು ಖಾತರಿಗೊಳಿಸುವಲ್ಲಿ ಹಾಗೂ ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸರ್ಕಾರಿ ಶಾಲೆಗಳಲ್ಲಿ ಪ್ರತಿ ತರಗತಿಗೆ ಶಿಕ್ಷಕರ ನೇಮಕವಾಗಬೇಕು.
9. ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ನಡೆಯುವ ಮಕ್ಕಳ ವಿಶೇಷ ಗ್ರಾಮಸಭೆಗಳಲ್ಲಿ ಕೈಗೊಂಡ ಎಲ್ಲಾ ತೀರ್ಮಾನಗಳು ಜಾರಿಯಾಗುವಂತೆ ಸರಕಾರ ಸೂಕ್ತ ಕ್ರಮ ವಹಿಸುವುದು.
10. ಜಿಲ್ಲೆಯಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಂಬಂಧಪಟ್ಟ ಇಲಾಖೆಗಳು ಹಾಗೂ ಮಕ್ಕಳ ಪರವಾಗಿ ಕೆಲಸ ಮಾಡುವ ಸರಕಾರೇತರ ಸಂಸ್ಥೆಗಳು ಈ ಕುರಿತಾಗಿ ಶಾಲೆಗಳಲ್ಲಿ ಮತ್ತು ಸಮುದಾಯಗಳಲ್ಲಿ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
11. ಪ್ರಸ್ತುತ ಜಾರಿಯಲ್ಲಿರುವ ಬಾಲ ಕಾರ್ಮಿಕರ, ಕಿಶೋರಾವಸ್ಥೆಯ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986, ಪರಿಣಾಮಕಾರಿ ಅನುಷ್ಠಾನವಾಗುವಂತೆ ಹಾಗೂ ಕಾಯಿದೆಯ ಅನ್ವಯ 14-18 ವರ್ಷದೊಳಗಿನ ಬಾಲ ಕಾರ್ಮಿಕರ ನೋಂದಣಿ ನಡೆಸುವಂತೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳುವುದು.
12. ಸಕಾಲಕ್ಕೆ ಶಾಲೆಗಳಿಗೆ ಶುಚಿ ಪ್ಯಾಡ್ ಪೂರೈಕೆ-ಯಾಗಬೇಕು ಮತ್ತು ಅವುಗಳ ಸೂಕ್ತ ವಿಲೇವಾರಿ-ಯಾಗಬೇಕು.
13. ಬಾಲ ಮಂದಿರದ ಮಕ್ಕಳಿಗಾಗಿ ಮೀಸಲಾದ ಅನುದಾನವು ಕಾಲ ಕಾಲಕ್ಕೆ ಮಕ್ಕಳ ಆರೋಗ್ಯ, ವಸತಿ ಊಟೋಪಚಾರ, ಶಿಕ್ಷಣಕ್ಕೆ ಬಿಡುಗಡೆ-ಯಾಗುವಂತೆ ಸರಕಾರ ಕ್ರಮ ಕೈಗೊಳ್ಳುವುದು.
14. ಬಾಲನ್ಯಾಯ ಕಾಯಿದೆ 2015ರ ಕರ್ನಾಟಕ ನಿಯಮಾವಳಿಗಳನ್ನು ಕೂಡಲೇ ಜಾರಿಗೊಳಿಸಿ ಬಾಲ ನ್ಯಾಯ ಕಾಯಿದೆ ಅನುಷ್ಠಾನಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು.
15. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಇಲಾಖೆಗಳು ಹಾಗೂ ಸಮಾನ ಮನಸ್ಕ ಸಂಘಟನೆಗಳು ಒಟ್ಟು ಸೇರಿ ಪ್ರತಿ ವರ್ಷ ಮಕ್ಕಳ ಹಕ್ಕುಗಳ ಮಾಸೋತ್ಸವ ಮಾದರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಮಾಹಿತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು.

ಈ ನಿರ್ಣಯಗಳು ಕಾರ್ಯಗತವಾಗಲು ನಾವೆಲ್ಲರೂ ಕೈ ಜೋಡಿಸಿ ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳ ಜೊತೆ ಶ್ರಮಿಸಿದಲ್ಲಿ ಮಗು ಸ್ನೇಹಿ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

# ನಗರಾಡಳಿತದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದ ಕುರಿತು ರಾಜ್ಯಮಟ್ಟದ ಕಾರ್ಯಾಗಾರ

ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಶಾಲಾ ಆಡಳಿತ ವ್ಯವಸ್ಥೆ ಮತ್ತು ನಗರ ಪ್ರದೇಶದ ಸ್ಥಳೀಯ ಸರಕಾರದ ಆಡಳಿತದಲ್ಲಿನ ಸಹಭಾಗಿತ್ವದ ಸಮಸ್ಯೆಗಳು ಮತ್ತು ಸವಾಲುಗಳ ಕುರಿತು ರಾಜ್ಯಮಟ್ಟದ ಕಾರ್ಯಾಗಾರವು ಬೆಂಗಳೂರಿನ ಬೆನ್ಸನ್‌ಟೌನ್ ನಲ್ಲಿ ಪಡಿ ಸಂಸ್ಥೆಯ ನೇತೃತ್ವದಲ್ಲಿ ನಡೆಸಲಾಗಿತ್ತು. ನಗರ ಆಡಳಿತ ಪ್ರದೇಶದಲ್ಲಿ ವಲಸೆ ಕಾರ್ಮಿಕತೆಯಿಂದಾಗಿ ರಾಜ್ಯದ ಬೇರೆ–ಬೇರೆ ಜಿಲ್ಲೆಗಳಿಂದ ಹಾಗೂ ಅಂತರ್‌ರಾಜ್ಯ–ದಿಂದಲೂ ಕೂಡ ಜೀವನೋಪಾಯ ನಿರ್ವಹಣೆಯ ಕಾರ್ಮಿಕತೆಗಾಗಿ ವಲಸೆ ಕುಟುಂಬಗಳು ಬರುತ್ತಿರುವುದು ಗಣನೀಯಾವಾಗಿ ಹೆಚ್ಚುತ್ತಿದೆ. ಈ ಕಾರಣದಿಂದಾಗಿ ಇಂತಹ ಕುಟುಂಬಗಳ ಮಕ್ಕಳು ಶಾಲೆಗೆ ಸೇರದೆ ಇರುವುದು, ಶಾಲೆಗೆ ಸೇರಿದ ಮಕ್ಕಳು ಅರ್ಧದಲ್ಲಿ ಶಾಲೆಬಿಟ್ಟು ಶಾಲೆಯಿಂದ ಹೊರಗೆ ಉಳಿಯುತ್ತಿರುವ ಮಕ್ಕಳಿಗೆ ಸೂಕ್ತ ರಕ್ಷಣೆ, ಆರೋಗ್ಯದ ಲಭ್ಯತೆಯ ಕೊರತೆಯಿಂದ ವಂಚಿತರಾಗಿತ್ತಿರುವುದು, ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುತ್ತಿರುವುದು, ಸಮಾಜದಲ್ಲಿ ಮತ್ತು ಮಕ್ಕಳ ಪೋಷಕರಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾನೂನು ಅರಿವು ಮತ್ತು ಮಾಹಿತಿಯ ಕೊರತೆ, ಶಾಲೆ ತೊರೆದ ಮಕ್ಕಳು ನಾನಾ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ಹಾಗೂ ಕಾನೂನಿನೊಡನೆ ಸಂಘರ್ಷಕ್ಕೀಡಾಗುವ ಚಟುವಟಿಕೆಗಳಲ್ಲಿ ನಿರಂತರ–ವಾಗಿ ಒಳಗಾಗುತ್ತಿರುವುದು ಇತ್ಯಾದಿ ವಿಷಯಗಳು ಚರ್ಚೆಗೆ ಬಂದಿರುತ್ತದೆ. ಹಾಗೂ ಈ ಬಗ್ಗೆ ನಗರ ಪ್ರದೇಶಗಳಲ್ಲಿ ಸೂಕ್ತವಾದ ಮೇಲ್ವಿಚಾರಣೆ ವ್ಯವಸ್ಥೆಗಳ ಕೊರತೆ ಇರುವುದನ್ನು ಗಮನಿಸಬಹುದಾಗಿದೆ. ಈಗಾಗಲೆ ಗ್ರಾಮಾಂತರ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಮಕ್ಕಳ ಹಕ್ಕುಗಳ ಭಾಗವಹಿಸುವಿಕೆಯ ಭಾಗವಾಗಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ ನಡೆಯುತ್ತಿದ್ದು, ಇದೇ ಮಾದರಿಯಲ್ಲಿ ನಗರ ಪ್ರದೇಶದ ಮಕ್ಕಳು ಸಾಮಾಜಿಕ ಅಭಿವೃದ್ಧಿಯಲ್ಲಿ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ ಎನ್ನುವ ವಿಚಾರಗಳು ಸಭೆಯಲ್ಲಿ ಮೂಡಿಬಂದವು.

ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ಸ್ವಯಂ ಸೇವಾ ಸಂಸ್ಥೆ ಪ್ರತಿನಿಧಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಭಾಗವಹಿಸಿದ ಈ ಕಾರ್ಯಾಗಾರದಲ್ಲಿ ನಗರ ಪ್ರದೇಶದಲ್ಲಿ ಶಿಕ್ಷಣಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಸವಾಲುಗಳನ್ನು ಗುರುತಿಸಲು ನಗರಾಡಳಿತ ಪ್ರದೇಶಕ್ಕೆ ಸಂಬಂಧಿಸಿದ ಸಮೀಕ್ಷೆಯನ್ನು ನಡೆಸಿ ವಾಸ್ತವತೆಯನ್ನು ಕಂಡುಕೊಳ್ಳುವ ಅಗತ್ಯತೆ ಇರುವ ಬಗ್ಗೆ ಅನಿಸಿಕೆ ಮೂಡಿಬಂದಿರುತ್ತದೆ. ಹಾಗೂ ಈ ಸಮೀಕ್ಷೆ ನಡೆಸುವ ನೇತ್ರತ್ವವನ್ನು ಪಡಿ ಸಂಸ್ಥೆಯ ಮೂಲಕ ಭಾಗವಹಿಸಿದ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದಲ್ಲಿ ನಡೆಸಲು ಅಭಿಪ್ರಾಯ ವ್ಯಕ್ತವಾಯಿತು.



## ಪತ್ರಿಕ ವರದಿ




ವಾರ್ತಾ ಭಾರತಿ


### ಮಕ್ಕಳಲ್ಲಿ ಮೊಬೈಲ್ ನಿಂದಾಗುವ ಅನಾಹುತಗಳ ಜಾಗೃತಿ ಅಗತ್ಯ



### ಹಕ್ಕು ಮತ್ತು ಕರ್ತವ್ಯಗಳನ್ನು ನಿರ್ವಹಿಸಿ

# ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸಂಸ್ಥೆಯಿಂದ 2024ರ ಕ್ಯಾಲೆಂಡರ್
















**PADI**

"Ganesh", 2nd Cross, Lower Bendoor, Mangaluru - 575 002

Dakshina Kannada, Karnataka, India,

Ph: 0824-2439895

Email: valored@gmail.com Website: www.padivalor

ಮಾರಾಟಕ್ಕಾಗಿ ಅಲ್ಲ